ಹಗರಣ ಮತ್ತು ಆತ ಪರಾರಿ ಆಗಿದ್ದು ಎಲ್ಲಾ ದಿನಪತ್ರಿಕೆಗಳಲ್ಲಿ ಬಂದಿತ್ತು.

''ನಮ್ಮ ತಂದೆ ಜನರು ಹೂಡಿಕೆ ಮಾಡಿದ್ದ ಹಣವನ್ನೆಲ್ಲಾ ಕಳೆದರು. ಅದು ಅವರ ತಪ್ಪಲ್ಲ. ಆಗ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟಿತ್ತು. ಈ ಪ್ರಾಮಾಣಿಕ ಮನುಷ್ಯ ಜನರಿಗೆ ಅನ್ಯಾಯವಾಗಿದ್ದನ್ನು ಸಹಿಸದೆ ಮನೆಯವರಿಗೂ ಮುಖ ತೋರಿಸದೆ ಈ ದೇಶ ಬಿಟ್ಟು ಹೋದರು. ಎಲ್ಲೋ ಅಪರಿಚಿತರಾಗಿ ತೀರಿಕೊಂಡರು. ಅವರ ಮೇಲೆ ಯಾವ ಆರೋಪವೂ ಇರಲಿಲ್ಲ ಎಂದಮೇಲೆ ವಾಪಸ್ಸು ಬರಬಹುದಾಗಿತ್ತು. ಆದರೆ, ಬರಲಿಲ್ಲ. ಸುಮಾರು ಎರಡು ವರ್ಷಗಳ ಹಿಂದೆ ತೀರಿಕೊಂಡಿರಬೇಕು. ನಮಗೆ ಇದರ ಬಗ್ಗೆ ಯಾವ ಮಾಹಿತಿಯೂ ಇಲ್ಲ. ಅವರು ಬದುಕಿದ್ದರೆ ವಾಪಸ್ಸು ಬರುತ್ತಿದ್ದರು. ಆದ್ದರಿಂದ ಅವರು ಇನ್ನಿಲ್ಲ ಅನ್ನುವುದು ನನ್ನ ಊಹೆ.''

''ಏನು, ಅವರು ತೀರಿಕೊಂಡರೆ?''

''ಇರಬೇಕು. ಅವರು ಮಾಡಿದ್ದ ಹೂಡಿಕೆ ಚೇತರಿಸಿಕೊಂಡರೂ ಅವರು ಬರಲಿಲ್ಲ. ಹಾಗಾಗಿ ಅವರು ತೀರಿಕೊಂಡಿರಬೇಕು.''

''ಎರಡು ವರ್ಷದ ಹಿಂದೆ ಅಂತ ಹೇಗೆ ತಿಳಿಯಿತು?''

''ಆಗ ಅವರಿಂದ ಒಂದು ಕಾಗದ ಬಂದಿತ್ತು.''

"ಹಾಗಾದರೆ ಅವರು ಎಲ್ಲಿದ್ದಾರೆ ಅಂತ ಗೊತ್ತಾಗಿರಬೇಕಲ್ಲವೆ?''

"ಇಲ್ಲ ಸರಿಯಾಗಿ ಗೊತ್ತಿಲ್ಲ; ಪ್ಯಾರಿಸ್‌ನಿಂದ ಅಂಚೆ ಬರುತಿತ್ತು. ಆಗತಾನೆ ನನ್ನ ತಾಯಿ ಸಹ ತೀರಿಕೊಂಡಿದ್ದಳು. ಈ ಕಾಗದಲ್ಲಿ ನನಗೆ ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದರು.''

"ಹಿಂದೆಯೂ ಅವರಿಂದ ಕಾಗದ ಬಂದಿತ್ತೇ?''

"ಹೌದು, ನೀವು ನೋಡಿದ ಮೊಹರು ಕೊಠಡಿ ಬಗ್ಗೆ ಸಹ ಒಂದು ಕಾಗದದಲ್ಲಿದೆ. ಅಲ್ಲಿ ನೋಡಿ, ಆ ಮೇಜಿನ ಮೇಲೆ ಅವರು ಬರೆದ ಕಾಗದಗಳು ಇವೆ. ದಯವಿಟ್ಟು ಇಲ್ಲಿ ತನ್ನಿ. ಪರ್ಸಿವಲ್ ಬಿಟ್ಟರೆ ನೀವೇ ಈ ಕಾಗದಗಳನ್ನು ನೋಡುತ್ತಿರುವುದು.''

''ಅಂದಹಾಗೆ ಈ ಪರ್ಸಿವಲ್ ಯಾರು?''

''ನನ್ನ ತಂದೆಯ ಮುಖ್ಯ ಗುಮಾಸ್ತ ಮತ್ತು ಆಪ್ತನಾಗಿದ್ದ, ನನ್ನ ತಾಯಿ ಬದುಕಿರುವವರೆಗೂ ಆತ ಸಂಪರ್ಕದಲ್ಲಿದ್ದ. ಇದು ಮೊದಲನೆ ಕಾಗದ, ನನ್ನ ತಂದೆ ಪರಾರಿ ಆದ ದಿನವೇ ಬಂತು. ಇದು ನನ್ನ ತಾಯಿಗೆ ಬರೆದಿದ್ದು, ನೀವೇ ಓದಿ.''

ನನ್ನ ಪ್ರೀತಿಯ ಮಡದಿ,

ಸರ್ (ಡಾ) ವಿಲಿಯಂ ನಿನ್ನ ಹೃದಯ ಎಷ್ಟು ದುರ್ಬಲವಾಗಿದೆ ಅಂತ ತಿಳಿಸಿದಾಗ ನನಗೆ ಅತ್ಯಂತ ಆತಂಕ ಉಂಟಾಗಿತ್ತು. ನಾನು ಇದುವರೆಗೂ ನನ್ನ ವ್ಯವಹಾರದ ಬಗ್ಗೆ ನಿನ್ನೊಂದಿಗೆ ಮಾತನಾಡಿಲ್ಲ. ಈಗ ನಾನು ತುಂಬಾ ಕಷ್ಟದ ಪರಿಸ್ಥಿತಿಯಲ್ಲಿ ಇದ್ದೇನೆ ಎಂದು ನಿನಗೆ ತಿಳಿಸಲು ನನಗೆ ಸಂಕೋಚ ಮತ್ತು ದುಃಖವಾಗುತ್ತಿದೆ. ನನ್ನಿಂದಾಗಿ ನಮ್ಮ ಸ್ನೇಹಿತರನ್ನೂ ಒಳಗೊಂಡು ಅನೇಕರು ಅವರು ಕೂಡಿಟ್ಟ ಹಣವನ್ನು ಕಳೆದುಕೊಂಡಿದ್ದಾರೆ. ಇದು ನನ್ನ ತಪ್ಪಲ್ಲ, ದೇಶದ ಆರ್ಥಿಕ ಸ್ಥಿತಿ ಹಾಗಿತ್ತು. ಈ ಅವಮಾನವನ್ನು ನಾನು ತಡೆಯಲಾರೆ. ಆದ್ದರಿಂದ ನಾನು ಎಲ್ಲರಿಂದ ತಲೆಮರೆಸಿಕೊಂಡು ಇರಬೇಕೆಂದು ತೀರ್ಮಾನಿಸಿ ಪರದೇಶದಲ್ಲಿ ಅಜ್ಞಾತವಾಸದಲ್ಲಿದ್ದೇನೆ. ಇದು ತಾತ್ಕಾಲಿಕ. ಪುನಃ ನಾವಿಬ್ಬರೂ ಒಂದಾಗಬಹುದು. ಆ ದಿನವನ್ನು ನಾನು ಎದುರು ನೋಡುತ್ತಿದ್ದೇನೆ. ನನಗೆ ನಿನ್ನಿಂದ ಒಂದು ಸಹಾಯ ಬೇಕು. ಇದನ್ನು ತಪ್ಪದೆ ನಡೆಸಿಕೊಡಬೇಕು ಎಂಬುದು ನನ್ನ ಕೋರಿಕೆ. ನಾನು ಒಂದು ಸಣ್ಣ ಕೋಣೆಯನ್ನು ಫೋಟೊ ಕೆಲಸಗಳಿಗೆ ಡಾರ್ಕ್‌ರೂಮ್ ಮಾಡಿಕೊಂಡಿದ್ದು ನಿನಗೆ ಗೊತ್ತಿದೆ. ನಾನು ಮನೆ ಬಿಡುವುದಕ್ಕೆ ಮುಂಚೆ ಅದನ್ನು ಭದ್ರ ಪಡಿಸಿದ್ದೇನೆ. ಅದಕ್ಕೆ ನೀನು ಬೀಗ